# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(ಸಿ1)ಪಿಆರ್/73/2021–22

ಮುಖ್ಯ ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 28/4/22

## ಸುತ್ತೋಲೆ

ವಿಷಯ: ಕಂಪ್ಯೂಟರ್ ಆಪರೇಟರ್‌ಗಳಿಗೆ ಸಂಬಂಧಪಟ್ಟ ವಲಯದಲ್ಲಿಯೇ ವೇತನ ಪಾವತಿಸುವ ಬಗ್ಗೆ.

* * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಮಾನವ ಸೇವೆಯನ್ನು ಒದಗಿಸುವ ಸಂಸ್ಥೆಯ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್‌ಗಳ ಸೇವೆಯನ್ನು ಪಡೆಯಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಂಪ್ಯೂಟರ್ ಆಪರೇಟರ್‌ಗಳ ಸೇವೆಯನ್ನು ಪಡೆಯುವ ವ್ಯವಸ್ಥೆಯನ್ನು ವಿಕೇಂದ್ರಿಕರಣಗೊಳಿಸಲಾಗಿದ್ದು, ಕೇಂದ್ರ ಕಛೇರಿಯ ಆವರಣದಲ್ಲಿರುವ ಕಛೇರಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೆ ಮಾತ್ರ ಆಡಳಿತ ಶಾಖೆಯಿಂದ ವೇತನ ಪಾವತಿಸಲಾಗುತ್ತಿದ್ದು, ಉಳಿದಂತೆ ವಲಯ ಮಟ್ಟದಲ್ಲಿನ ಕಛೇರಿಗಳಿಗೆ ಸಂಬಂಧಿಸಿದಂತೆ ಆಯಾ ವ್ಯಾಪ್ತಿಯ ವಲಯ ಜಂಟಿ ಆಯುಕ್ತರವರ ಕಛೇರಿಗಳಿಂದ ವೇತನ ಪಾವತಿಸಲಾಗುತ್ತಿರುತ್ತದೆ.

ಆದಾಗ್ಯೂ, ವಲಯ ಮಟ್ಟದಲ್ಲಿರುವ ಕೆಲವು ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೆ ಕೇಂದ್ರ ಕಛೇರಿಯಿಂದಲೇ ವೇತನ ಪಾವತಿಸಲಾಗುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಕೇಂದ್ರ ಕಛೇರಿಯ ಆವರಣದಲ್ಲಿರುವ ಕಛೇರಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳನ್ನು ಹೊರತುಪಡಿಸಿ, ಇನ್ನುಳಿದ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೆ ವೇತನವನ್ನು ಸಂಬಂಧಪಟ್ಟ ವಲಯ ಕಛೇರಿಯಲ್ಲಿಯೇ ಪಾವತಿಸಲು ಅಗತ್ಯಕ್ರಮ ಕೈಗೊಳ್ಳತಕ್ಕದ್ದು. ಇದರಂತೆ, ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಿರುವ ಸಂಸ್ಥೆಗಳಿಂದ ಕಂಪ್ಯೂಟರ್ ಆಪರೇಟರ್‌ಗಳ ಸೇವೆಯನ್ನು ಪಡೆದಿರುವ ಬಟವಾಡೆ ಅಧಿಕಾರಿಗಳು / ಕಛೇರಿ ಮುಖ್ಯಸ್ಥರುಗಳು ಕಂಪ್ಯೂಟರ್ ಆಪರೇಟರ್‌ಗಳ ಹಾಜರಾತಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ವಲಯ ಜಂಟಿ ಆಯುಕ್ತರವರಿಗೆ ಕಳುಹಿಸಲು ತಿಳಿಯಪಡಿಸಿದೆ.

ವಿಶೇಷ ಆಯುಕ್ತರು (ಆಡಳಿತ)
ರವರ ಆದೇಶದಂತೆ)

28/4/22
ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
27/4/22
27/04/2022

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಎಲ್ಲಾ ವಿಶೇಷ ಆಯುಕ್ತರು ರವರುಗಳ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಕಳುಹಿಸಿದೆ.
: ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸಿದೆ.
: ಮುಖ್ಯಸ್ಥರು, ಮೆ॥ ಸ್ಟ್ರಾಟೆಜಿಕ್ ಔಟ್ ಸೋರ್ಸಿಂಗ್ ಸರ್ವಿಸಸ್ಸ್ ಸಂಸ್ಥೆ, ಆರ್.ಎಂ.ಎಸ್. ಟೆಕ್ನಾಲಜಿಸ್ ಸಂಸ್ಥೆ ಎಸ್.ಆರ್. ಸೆಕ್ಯೂರಿಟಿ ಸರ್ವೀಸಸ್ ಸಂಸ್ಥೆ, ಶ್ರೀ ಸತ್ಯಸಾಯಿ ಅಸೋಸಿಯೇಟ್ಸ್ ಸಂಸ್ಥೆ ರವರುಗಳಿಗೆ ಕಳುಹಿಸಿದೆ.
: ಕಛೇರಿ ಪ್ರತಿ
: ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಮಾಹಿತಿಗೆ ಹಾಗೂ ಬಿಬಿಎಂಪಿ ವೆಬ್‌ಸೈಟ್ ನಲ್ಲಿ ಅಳವಡಿಸಲು ಕಳುಹಿಸಿದೆ